# ಹೊಸ ಮರದಲಿ ಹೊಸ ಹೂವು ಯುಗಾದಿಯೆ ಒಲವು–ಚೆಲುವು



ಮರಗಿಡಗಳು ಹೊಸ ಚಿಗುರು ತೊಟ್ಟಂತೆ ಹೊಸತಾಗುವ ಅವಕಾಶ ನಮಗಿಲ್ಲ. ಮನಸ್ಸಿಗೆ ಹೊಸ ಪೋಷಾಕು ತೊಡಿಸುವ, ಕರುಣೆ ಪ್ರೇಮಗಳ ಅಂತರ್ಜಲವನ್ನು ಅಂತರಂಗಕ್ಕೆ ಉಣಿಸುವ ಅವಕಾಶ ನಮಗಿದ್ದೇ ಇದೆ.

■ ಮಹತಿ

ಕಾಲವೃಕ್ಷದಲ್ಲಿ ಚಿಗುರಿದ ಹೊಸ ಎಲೆಯಂತೆ ಹೊಸತೊಂದು ವರ್ಷ ನಮ್ಮ ಬದುಕಿನ ಬೆರಳು ಹಿಡಿದು ಜೊತೆಯಾಗಿದೆ. ಹೊಸತಿನ ನಿರೀಕ್ಷೆ ಹಾಗೂ ಹೊಸತನದ ಹುಡುಕಾಟವೇ ನಮ್ಮ ಬದುಕಾಗಿರುವಾಗ, 'ಹೊಸ ವರ್ಷ' ಸಹಜವಾಗಿಯೇ ಮಹತ್ವ ಪಡೆದುಕೊಳ್ಳುತ್ತದೆ. 'ಯುಗಾದಿ' ಹಬ್ಬದ ಹೆಚ್ಚುಗಾರಿಕೆ ಇರುವುದು ಈ ಹೊಸತನ್ನು ನಮ್ಮ ಬದುಕಿಗೆ ಕಸಿ ಮಾಡುವುದರಲ್ಲಿ.

ಪ್ರತಿ ಹಬ್ಬವೂ ಒಂದಲ್ಲಾ ಒಂದು ಬಗೆಯಲ್ಲಿ ದೈವ ಹಾಗೂ ಪ್ರಕೃತಿಯೊಂದಿಗೆ ಮನುಷ್ಯನ ನಂಟನ್ನು ನವೀಕರಿಸುವ ಕೆಲಸವನ್ನು ಮಾಡುತ್ತದೆ. ಯುಗಾದಿಯ ಕೇಂದ್ರದಲ್ಲೂ ದೈವವಿದೆ, ಪ್ರಕೃತಿಯಿದೆ. ಆದರೆ, ಉಳಿದ ಯಾವ ಹಬ್ಬಕ್ಕೂ ಇರದ ಜೀವನದರ್ಶನವೊಂದು ಯುಗಾದಿಗಿದೆ. ದೈವದ ಆರಾಧಾನೆಯಿದ್ದರೂ ಪ್ರಕೃತಿಯ ಉಪಾಸನೆಗೆ ಹೆಚ್ಚು ಒತ್ತು ಈ ಹಬ್ಬದಲ್ಲಿದೆ.

ಯುಗಾದಿಯ ಜೀವನದರ್ಶನ ಯಾವುದು? ಆ ದರ್ಶನವನ್ನು ವರಕವಿ ಬೇಂದ್ರೆಗಿಂತಲೂ ಸೊಗಸಾಗಿ ಕಾಣಲು ಸಾಧ್ಯವೆ? ಯುಗಾದಿ ಮರಳಿ ಮರಳಿ ಬರುತಿದೆ ಎಂದರು ಬೇಂದ್ರೆ. 'ಬೇವಿನ ಕಹಿ ಬಾಳಿನಲ್ಲಿ ಹೂವಿನ ನಸುಗಂಪು ಸೂಸಿ ಜೀವಕಳೆಯ ತರುತಿದೆ' ರೂಪದಲ್ಲಿ ಮರುಕಳಿಸುವುದು ಯುಗಾದಿ. ಯುಗದ ಆದಿಯ ಹೊತ್ತು ಯೌವನ ನವೀಕರಣಗೊಂಡಂತೆ ಇಡೀ ಪ್ರಕೃತಿ ಕಂಗೊಳಿಸುತ್ತದೆ. 'ವರುಷಕೊಂದು ಹೊಸತು ಜನ್ಮ ಹರುಷಕೊಂದು ಹೊಸತು ನೆಲೆಯು ಅಖಿಲ ಜೀವಜಾಲಕೆ.' ನಮಗೆ ಆ ಭಾಗ್ಯವಿಲ್ಲ. 'ನಿದ್ದೆಗೊಮ್ಮೆ ನಿತ್ಯ ಮರಣ ಎದ್ದ ಸಲ ನವೀನ ಜನನ ನಮಗೆ ಏಕೆ ಬಾರದೋ?' ಎನ್ನುವುದು ಕವಿಯ ಪ್ರಶ್ನೆ.

ಒಂದು ಜನ್ಮ, ಒಂದು ಬಾಲ್ಯ, ಒಂದು ಹರಯವಷ್ಟೇ ನಮಗೆ ಎನ್ನುವ ಕವಿಯ ಮಾತನ್ನು ನಾವು ಸೂಕ್ಷ್ಮವಾಗಿ ಗಮನಿಸಬೇಕು. ಪ್ರತಿ ವರ್ಷವೂ ಹೊಸ ಹುಟ್ಟನ್ನು ಪಡೆಯುವ ಪ್ರಕೃತಿಯ ಸಾಮರ್ಥ್ಯ ನಮಗಿಲ್ಲ ಎನ್ನುವುದು ನಮ್ಮ ಬದುಕಿನ ಮಿತಿಯನ್ನು ಸ್ಪಷ್ಟಗೊಳಿಸುವಂತಹದ್ದು. ವಿಪರ್ಯಾಸ ನೋಡಿ. ಬದುಕಿನ ಮಿತಿಯ ಅರಿವಿದ್ದೂ ಜೀವನ ಶಾಶ್ವತ ಎನ್ನುವಂತೆ ವರ್ತಿಸುತ್ತೇವೆ. ಬದುಕಿನ ಸಾರ್ಥಕತೆ ಇರುವುದು ಸ್ನೇಹ ಪ್ರೇಮದ ಗಳಿಕೆಯಲ್ಲಿ. ಆದರೆ, ನಮ್ಮದು ಜಿದ್ದಿನ ಹಾದಿ. ಕರುಳಕುಡಿಗಳ ನಡುವೆಯೇ ಈರ್ಷ್ಯೆ, ಸೇಡು. ಕೂಡಿ ಬಾಳುವುದರ ಬದಲು, ಒಡೆಯುವುದರಲ್ಲಿ ಆಸಕ್ತರಾಗಿದ್ದೇವೆ. ಇದರ ಪರಿಣಾಮವಾದರೂ ಏನು? ಯಾರ ಬದುಕಿನಲ್ಲೂ ನೆಮ್ಮದಿಯ ತಣಿವಿಲ್ಲ. ಇದನ್ನು ಮೀರುವುದು ಹೇಗೆ? ಮೀರುವ ಶಕ್ತಿಯನ್ನು ಯುಗಾದಿ ನಮಗೆ ತಂದುಕೊಡಬಹುದೆ?

ಮಿತಿಗಳನ್ನು ಅರಿತುಕೊಳ್ಳುವುದೆಂದರೆ, ಸಾಧ್ಯತೆಗಳನ್ನು ಅರಿತುಕೊಳ್ಳುವುದೆಂದೇ ಅರ್ಥ. ಆ ಕಾರಣದಿಂದಲೇ 'ಒಂದೆ ಒಂದು ಜನ್ಮದಲ್ಲಿ ಒಂದೆ ಬಾಲ್ಯ ಒಂದೆ ಹರಯ' ಎಂದು ನಾವು ಕೊರಗಬೇಕಿಲ್ಲ. ಭೌತಿಕವಾಗಿ ಹೊಸ ಹರಯ ನಮಗೆ ಸಾಧ್ಯವಿಲ್ಲದಿರಬಹುದು. ಆದರೆ, ಮಾನಸಿಕವಾಗಿ ಬಾಲ್ಯ ಹಾಗೂ ಯೌವನವನ್ನು ನವೀಕರಿಸಿಕೊಳ್ಳುವುದು ಸಾಧ್ಯವಿದ್ದೇ ಇದೆ. ಆ ಸಾಧ್ಯತೆಗೆ ಇಂಬು ಕೊಡುವಂತಹದ್ದು



ಪೇಟೆಯಲ್ಲಿ ಯುಗಾದಿ ಬಣ್ಣಗಳು

ಯುಗಾದಿ. 'ತೊಲಗಲಿ ದುಃಖ, ತೊಲಗಲಿ ಮತ್ಸರ, ಪ್ರೇಮಕೆ ಮೀಸಲು ನವ ಸಂವತ್ಸರ!' ಎನ್ನುತ್ತಾರೆ ಕುವೆಂಪು. ಯುಗಾದಿ ಮರಳಿ ಬರುತಿದೆ ಎನ್ನುವ ಮಾತು, ನಮ್ಮ ಭಾವಕೋಶಗಳನ್ನು ಹೊಸತಾಗಿಸುವುದಕ್ಕೆ ಆರ್ದ್ರಗೊಳಿಸುವುದಕ್ಕೆ ಪ್ರೇರಣೆಯಾಗಬೇಕು. ಮರಗಿಡಗಳು ಹೊಸ ಚಿಗುರು ತೊಟ್ಟಂತೆ ಚರ್ಮ ಬದಲಿಸಿಕೊಳ್ಳುವುದು ನಮಗೆ ಸಾಧ್ಯವಿಲ್ಲದಿರಬಹುದು. ಆದರೆ, ಹೊಸ ಉಡುಪಿನ ಅವಕಾಶ ಇದ್ದೇ ಇದೆ! ಮನಸ್ಸಿಗೆ ಹೊಸ ಉಡುಪನ್ನು ತೊಡಿಸುವ, ಕರುಣೆ ಪ್ರೇಮಗಳ ಅಂತರ್ಜಲವನ್ನು ಅಂತರಂಗಕ್ಕೆ ಉಣಿಸುವ ಅವಕಾಶ ನಮ್ಮದೇ ಆಗಿದೆ.

ಬೇವು–ಬೆಲ್ಲದ ಸ್ವೀಕಾರ ಯುಗಾದಿಯ ಆಚರಣೆಗಳಲ್ಲೊಂದು. 'ದೊಡ್ಡ ದೊಡ್ಡ